**ಕಣ್ಣು ಮುಚ್ಚಿ ಗೋಡೆಗೆ ಒರಗಿದ್ದ ಸಾಲಿಹಾ ಇದೇನಾಗುತ್ತಿದೆ ಎಂದು ಒಮ್ಮೆ ಕಣ್ಣು ತೆರೆದು ನೋಡಿದಳು ಮತ್ತು ಕಣ್ಣು ಮುಚ್ಚಿಕೊಂಡಳು. ಎಲ್ಲರಿಗೂ ಒಂದೇ ಪ್ರಶ್ನೆ ಸಾಲಿಹಾಳ ಕಣ್ಣು ಯಾಕೆ ಧುಮ್ಮಿಕ್ಕುತ್ತಿಲ್ಲ ಇವಳಿಗೆ ಏನಾಗಿದೆ?**

ಕೂತಿದೆ'. ಆದರೆ ಮೊದಲಿಗಿಂತಲೂ ತೀವ್ರವಾಗಿ ಅವಳ ಇಡೀ ಮೈ ಗಡ ಗಡನೇ ನಡುಗಲಾರಂಭಿಸಿತು. ಹಲ್ಲುಗಳು ಒಂದಕೊಂದು ತಾಗಿ ಕಟ ಕಟ ಎಂದು ಸದ್ದು ಮಾಡತೊಡಗಿದವು. ಅವಳನ್ನು ಬಿಟ್ಟರೆ ಆ ಗೊಂದಲದಲ್ಲಿ ಬೇರೆ ಯಾವ ಹೆಣ್ಣು ಜೀವವೂ ಇರಲಿಲ್ಲ. ಆದರೆ ಅಲ್ಲಿದ್ದ ಗಂಡಸರಲ್ಲಿ ಕೆಲವರು ಹೊರ ಹೋಗಿ, ತಲೆಯ ಮೇಲೆ ಸೆರಗು ಹೊದ್ದು ಕಣ್ಣಂಚಿನಲ್ಲಿ ನೀರು ಮಡುಗಟ್ಟಿದ್ದ ಹೆಂಗಸರನ್ನು ಮನೆಯೊಳಗೆ ಕಳಿಸಿದರು. ಆ ಕ್ಷಣದಲ್ಲೂ ಅವರಿಗೆ ಹೆಣ್ಣನ್ನು ಸ್ಪರ್ಶಿಸಬಾರದೆಂಬ ಎಚ್ಚರ ಕಂಡು ಬರುತ್ತಿತ್ತು. ಹಾಲ್‌ನಲ್ಲಿ ಮಹಿಳೆಯರು ಹೋದ ನಂತರ ದೊಡ್ಡ ಧ್ವನಿಯಲ್ಲಿ ಚರ್ಚೆ ಆರಂಭವಾಯಿತು. ಅದು ಹೇಗೋ ಆ ಮಹಿಳೆಯರ ಮಧ್ಯ ಫೈಜಾ ಕೂಡ ನುಸುಳಿಕೊಂಡು ಬಂದಿದ್ದಳು. ಹೌದು ಅದು ಅವಳದ್ದೇ ಧ್ವನಿ. ಅವಳು ಏರು ಧ್ವನಿಯಲ್ಲಿ ಹೇಳುತ್ತಿದ್ದಳು, ''ಕೂಡಲೇ ಆಂಬುಲೆನ್ಸ್ ಕರೆಸಿ, ಇವಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕು". ನಡುವೆ ಅವಳು ಬಿಕ್ಕುತ್ತಿದ್ದಳು.

''ಬೇಡ ಖಂಡಿತ ಬೇಡ. ಅವಳ ಪ್ರಾಣ ಹೋಗಿದೆ. ಮತ್ತೆ ಆಸ್ಪತ್ರೆಗೆ ಹೋದರೆ ಪೊಲೀಸ್ ಕೇಸ್ ಆಗುತ್ತೆ. ಪೋಸ್ಟ್‌ಮಾರ್ಟಂ ಅಂತ ಕೊಯ್ದು ಹಾಕ್ತಾರೆ. ಅವಳಿಗೆ ಮತ್ತಷ್ಟು ತೊಂದರೆ ಯಾಕೆ ಕೊಡಬೇಕು?''

''ಹೋಗಲಿ, ಮೊಹಲ್ಲಾದ ಡಾಕ್ಟರನಾದರೂ ಕರೆಯಿರಿ" ಮತ್ತೊಂದು ಧ್ವನಿ. "ಯಾರು ಬರತಾರೆ? ಇಂತಹ ವಿಷಯವನ್ನು ಮೈಮೇಲೆ ಎಳಕೊಂಡು ಒದ್ದಾಡೋಕೆ ಯಾವ ಡಾಕ್ಟರ್ ಬರ್ತಾರೆ?''

''ಯಾರಾದರೂ ಮನುಷ್ಯ ಅಂತ ಅನಿಸಿಕೊಂಡಿರೋ ಡಾಕ್ಟರ್ ಬರ್ತಾರೆ. ಮೊದಲು ಕರೆಯಿರಿ'' ಫೈಜಾಳ ಅಬ್ಬರದ ಧ್ವನಿಗೆ ಯಾರೋ ಒಬ್ಬ ಹೋಗಿ ಡಾಕ್ಟರನ್ನು ಕರೆ ತಂದ.

ಹಾಗೆ ನೋಡಿದರೆ ಡಾಕ್ಟರ್ ಹಮೀದ್ ಆ ಕುಟುಂಬದ ವೈದ್ಯರು. ಅವರು ಬಂದು ಪರೀಕ್ಷೆ ಮಾಡಿ ಉಹೂಂ ಎನ್ನುವಂತೆ ತಲೆ ಅಲ್ಲಾಡಿಸಿ ಅತ್ಯಂತ ಉದಾಸ ಭಾವದಿಂದ ನಡೆದುಹೋದರು.

ಅಷ್ಟರಲ್ಲೇ ಹಾಲ್‌ನಿಂದ ಹೊರ ಬಂದ ಒಂದಿಬ್ಬರು ಮಹಿಳೆಯರು ಸಾಲಿಹಾಳ ಎಡ ಬಲ ಪಕ್ಕದಲ್ಲಿ ನಿಂತು ಅವಳನ್ನು ಎಬ್ಬಿಸಲು ಪ್ರಯತ್ನಿಸಿದರು. ಅವಳು ಕಲ್ಲಾಗಿ ಬಿಟ್ಟಿದ್ದಳು, ಕಲ್ಲಿನಷ್ಟೇ ಭಾರವಾಗಿ ಬಿಟ್ಟಿದ್ದಳು. ಒಂದೇ ಒಂದು ಹನಿ ಕಣ್ಣೀರು... ಉಹೂಂ... 'ಇವರೆಲ್ಲ ಯಾಕೆ ಹೀಗೆ ಆಡುತಿದ್ದಾರೆ? ಒಂದಿಷ್ಟು ಶಾವಿಗೆ ಪಾಯಿಸವನ್ನು ಅವಳು ಕುಡಿದಿರಬಹುದು. ಈಗ ಮಲಗಿದಾಳೆ, ಯಾಕೆ ಇವರೆಲ್ಲ ಗಲಾಟೆ ಮಾಡುತ್ತಿದ್ದಾರೆ. ಅವಳು ಚೆನ್ನಾಗಿ ನಿದ್ರೆ ಮಾಡಬೇಕೆಂದು ಡಾಕ್ಟರ್ ಹೇಳಿದಾರೆ.' ಅವಳು ತನ್ನದೇ ಲೋಕದಲ್ಲಿ ಕಳೆದುಹೋಗಿದ್ದಳು. ಮತ್ತೊಬ್ಬ ಮಹಿಳೆ ಹೊರ ಬಂದು, 'ಸಾಲಿಹಾ ಮಗುವಿನದೊಂದು ನೈಟಿ ಬೇಕಿತ್ತಮ್ಮ' ಎಂದು ಅತ್ಯಂತ ಮೃದುವಾಗಿ ಕೇಳಿದಳು. ಫೈಜಾಗೆ ವಾಸ್ತವದ ಅರಿವಾಗಿತ್ತು. ತೊಟ್ಟಿದ್ದ ನೈಟಿಯಲ್ಲಿ ಸಾವಿನ ಸಮ್ಮುಖದಲ್ಲಿ ಅವಳು ಮಲ ವಿಸರ್ಜನೆ ಮಾಡಿದ್ದು ಅಪಾರ ಯಾತನೆಯನ್ನು ಅನುಭವಿಸಿದ್ದಳು. ಯಾವುದೇ ಶವವನ್ನು ಕಲ್ಮಶದೊಡನೆ ಇರಿಸಲು ಸಾಧ್ಯವಿಲ್ಲ. ಫೈಜಾ ಅವಳ ಕೋಣೆಯೊಳಗಡೆ ಓಡಿದಳು.